ಓ ಎಸ್ ನಂ. 193/2020

ಡಿ ಡಬ್ಲ್ಯೂ: 1

ದಿನಾಂಕ 11-06-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ಎಸ್ ಆರ್ ವಕೀಲರಿಂದಃ

ನಾನು ಬಿ ಕಾಂ ವ್ಯಾಸಂಗ ಮಾಡಿದ್ದು, ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾತನಾಡಲು, ಬರೆಯಲು ಮತ್ತು ಮಾತನಾಡಲು ಬರುತ್ತದೆ. ವಾದಿ ನನಗೆ ಸುಮಾರು 8-10 ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿಯ ಮಕ್ಕಳಾದ ಸಂತೋಷ್ ಮತ್ತು ಶಾಂತಕುಮಾರ್ ರವರು ಪರಿಚಯ ಸಹ ನನಗೆ ಇದೆ. ನಾನು ಯಾವುದೇ ಒಂದು ದಾಖಲೆ ಪತ್ರ ಕನ್ನಡದಲ್ಲಿಯಾಗಲಿ, ಇಂಗ್ಲೀಷ್ ಭಾಷೆಯಲ್ಲಿಯಲ್ಲಾಗಲಿ ಇರಲಿ ಅವುಗಳನ್ನು ಓದಿ ಸಹಿ ಮಾಡುತ್ತೇನೆ ಎಂದರೆ ನಿಜ. ನಾನು ಸಿಮೆಂಟ್ ವ್ಯವಹಾರ ಮಾಡುತ್ತೇನೆ. ನಾನು ಎ ಸಿ ಸಿ ಸಿಮೆಂಟ್ ಏಜೆನ್ಸಿ ಹೊಂದಿರುತ್ತೇನೆ.

2. ನಾನು ಚಿಕ್ಕಮಗಳೂರಿನ ಮಧುವನ ಲೇಔಟ್ ನಲ್ಲಿ ವಾಸಿಸುತ್ತಿದ್ದೇನೆ. ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ಅವರುಗಳೆಂದರೆ 1. ಅಮರನಾಥ 2. ನಾನು ಅಂದರೆ ಹರೀಶ್ 3. ಶ್ರೀನಾಥ್ 4. ನಾಗೇಶ್. ನಮ್ಮ 4 ಜನಗಳ ಪೈಕಿ ನನ್ನ ಹಿರಿಯ ಸಹೋದರನಾದ ಅಮರನಾಥ ರವರು ಖಾಸಗಿ ವೈದ್ಯರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಉಳಿದ ಮೂರು ಜನ ಸಹೋದರರಾದ

ನಾವು ಒಟ್ಟಿಗೆ ವ್ಯವಹಾರ ಮಾಡುತ್ತೇವೆ. ಅಮರನಾಥರವರು ಬೆಂಗಳೂರಿನ ವಸಂತ ನಗರದಲ್ಲಿರುವ ಟಿ ವಿ ಟವರ್ ನ ಬಳಿ ಇರುವ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಅವರು ಅಲ್ಲಿಯೇ ಕ್ಲಿನಿಕ್ ಮತ್ತು ಮನೆ ಹೊಂದಿದ್ದಾರ ಎಂದರೆ ಸಾಕ್ಷಿ ಅವರು ಕ್ಲಿನಿಕ್ ಹೊಂದಿಲ್ಲ ವಿಸಿಟಿಂಗ್ ಕನ್ಸಲ್ಟಂಟ್ ಆಗಿ ಬೇರೆ ಬೇರೆ ಆಸ್ಪತ್ರೆಗೆ ಹೋಗುತ್ತಾರೆ ಎಂದು ನುಡಿದಿರುತ್ತಾರೆ.

3. ನನ್ನ ಎ ಸಿ ಸಿ ಸಿಮೆಂಟ್ ವ್ಯವಹಾರಕ್ಕೆ ಸಂಬಂದಪಟ್ಟಂತೆ ವ್ಯವಹಾರದ ಖಾತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (ಕಾರ್ಪೋರೇಷನ್ ಬ್ಯಾಂಕ್) ನಲ್ಲಿರುತ್ತದೆ. ನನ್ನ ವೈಯುಕ್ತಿಕ ಬ್ಯಾಂಕ್ ಖಾತೆ ಚಿಕ್ಕಮಗಳೂರಿನ ತೊಗರಿಅಂಕಲ್ ಸರ್ಕಲ್‌ನಲ್ಲಿರುವ ಬ್ಯಾಂಕ್ ಆಫ್ ಇಂಡಿಯಾದಲ್ಲಿರುತ್ತದೆ. ನಾನು ಕಾಗದ ಪತ್ರಕ್ಕೆ ಸಹಿ ಮಾಡುವಾಗ ಇಂಗ್ಲೀಷ್ ಭಾಷೆಯಲ್ಲಿ ಎಸ್ ಎಸ್ ಹರೀಶ್ ಎಂದು ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ-1 ರ ಚೆಕ್ಕು ನನ್ನ ವೈಯುಕ್ತಿಕ ಖಾತೆಗೆ ಸಂಬಂದಪಟ್ಟಿದ್ದಾಗಿರುತ್ತದೆ. ಸಾಕ್ಷಿ ಮುಂದುವರೆದು ಸದರಿ ಚೆಕ್ಕಿನಲ್ಲಿರುವಂತಹ ಬರವಣಿಗೆ ನನ್ನದ್ದಲ್ಲ ಎಂದು ನುಡಿದಿರುತ್ತಾರೆ. ನಿಪಿ-1 ರ ಚೆಕ್ಕಿನಲ್ಲಿ ಇರುವಂತಹ ನಿಪಿ-1(ಎ)ರಲ್ಲಿ ಗುರುತಿಸಿರುವ ಸಹಿ ನನ್ನದೆ ಎಂದರೆ ಸರಿ. ನಿಪಿ-1 ರ ಚೆಕ್ಕನ್ನು ನಾನು ವಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ಯಾರಿಗೆ ಕೊಟ್ಟಿದ್ದೆ ಎಂದರೆ ಸಾಕ್ಷಿ ಸದರಿ ಚೆಕ್ಕು ನನ್ನ ಮನೆಯಲ್ಲಿತ್ತು, ನನ್ನ ಮನೆಗೆ ವಾದಿಯವರು

ಜಾಯಿಂಟ್ ವೆಂಚರ್ ಗೆ ಸಂಬಂದಪಟ್ಟಂತೆ ಬಂದು ಹೋಗಿ ಮಾಡುತ್ತಿದ್ದರು. ಆ ನಂತರ ಈ ದಾವೆ ಹೂಡಿದ್ದು, ಈ ದಾವೆಯಲ್ಲಿ ಸದರಿ ಚೆಕ್ಕು ವಾದಿ ಬಳಿ ಇದೆ ಎಂದು ಗೊತ್ತಾಯಿತು. ನನಗೆ ತಿಳಿಯದ ಹಾಗೇ ಆ ಚೆಕ್ಕು ವಾದಿಗೆ ಸೇರಿರುತ್ತದೆ. ದಿನಾಂಕ 15/02/2015 ರಂದು ನಿಪಿ-1 ರ ಚೆಕ್ಕು ನಿಪಿ-2 ರಿಂದ 4 ರ ಹಿಂಬರಹಗಳಂತೆ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿರುತ್ತದೆ ಎಂದರೆ ಸಾಕ್ಷಿ ಸದರಿ ಚೆಕ್ಕನ್ನು ಹಾಜರುಪಡಿಸಿದ್ದ ವಿಚಾರ ನನಗೆ ತಿಳಿದೆ ಇಲ್ಲ. ಈ ದಾವೆ ಹೂಡಿದ ನಂತರ ಸದರಿ ಚೆಕ್ಕು ಅಮಾನ್ಯಗೊಂಡ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. ಬ್ಯಾಂಕ್ ಆಫ್ ಇಂಡಿಯಾದಲ್ಲಿರುವ ನನ್ನ ವೈಯುಕ್ತಿಕ ಖಾತೆಯಲ್ಲಿ ಹಣದ ವ್ಯವಹಾರ ಮಾಡುತ್ತಿಲ್ಲವಾ ಎಂದರೆ ಸಾಕ್ಷಿ ಅದು ನನ್ನ ವೈಯುಕ್ತಿಕ ಖಾತೆಯಾಗಿದ್ದು, ಅದರಲ್ಲಿ ವ್ಯವಹಾರ ಕಡಿಮೆ ಮಾಡುತ್ತೇನೆ ಎಂದು ನುಡಿದಿರುತ್ತಾರೆ.

4. ಎಸ್ ಎಸ್ ಹರೀಶ್, ಭಾರತ್ ಪೆಟ್ರೋಲಿಯಂ ಡೀಲರ್ ಡೋರ್ ನಂ.ಸಿ-95, ಎಂ ಜಿ ರೋಡ್, ಚಿಕ್ಕಮಗಳೂರು ನನ್ನ ವಿಳಾಸವಾಗಿರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಪ್ರಸ್ತುತ ಬೇರೆ ವಿಳಾಸದಲ್ಲಿ ವಾಸ ಇದ್ದೇನೆ ಎಂದು ನುಡಿದಿರುತ್ತಾರೆ. ಮೇಲೆ ಹೇಳಿದ ವಿಳಾಸಕ್ಕೆ ಎ ಆರ್ ಶ್ರೀನಿವಾಸಯ್ಯ, ವಕೀಲರು ನಿಪಿ-1 ರ ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ಆ ಬಗ್ಗೆ ಒಂದು ಲೀಗಲ್

ನೋಟೀಸನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಮರೆತು ಹೋಗಿದೆ ಎಂದು ನುಡಿದಿರುತ್ತಾರೆ. ನಿಪಿ-7 ರ ಅಂಚೆ ಲಕೋಟೆಯಲ್ಲಿ ನಮೂದಿಸಿರುವ ವಿಳಾಸ ನನ್ನದಾಗಿರುತ್ತದೆ. 2015 ರಲ್ಲಿ ನಾನು ಸದರಿ ವಿಳಾಸದಲ್ಲೆ ವಾಸ ಇದ್ದೆ ಎಂದರೆ ನಿಜ. ನಿಪಿ-7 ರ ಅಂಚೆ ಲಕೋಟೆಯಲ್ಲಿ "party refused, hence returned to sender" ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಅಂಚೆ ಲಕೋಟೆ ನನಗೆ ಬಂದಿದ್ದ ವಿಚಾರ ತಿಳಿದಿಲ್ಲ ಎಂದು ನುಡಿದಿರುತ್ತಾರೆ.

5. ಚೆಕ್ಕು ಅಮಾನ್ಯಗೊಂಡಿರುವ ವಿಚಾರ ನನಗೆ ಯಾವಾಗ ತಿಳಿದುಬಂತು ಎಂದರೆ ಸಾಕ್ಷಿ ಈ ದಾವೆ ಹೂಡಿದ ನಂತರದಲ್ಲಿ ಎಂದು ನುಡಿದಿರುತ್ತಾರೆ. ವಾದಿ ಪ್ರಸ್ತುತ ದಾವೆಯಲ್ಲಿ ಏನೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆಂದು ನಾನು ತಿಳಿದುಕೊಂಡಿರುತ್ತೇನೆ. ಏನೆಲ್ಲಾ ದಾಖಲೆಗಳನ್ನು ವಾದಿ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿ ಚೆಕ್ಕು ಮತ್ತು ಇನ್ನಿತರ ದಾಖಲೆ ಎಂದು ನುಡಿದಿರುತ್ತಾರೆ. ಚೆಕ್ಕು ಅಮಾನ್ಯಗೊಂಡ ವಿಚಾರ ದಾವೆ ಹೂಡಿದ ನಂತರ ನನಗೆ ತಿಳಿದುಬಂತು ಎಂದು ನಾನು ತಿಳಿಸಿದ್ದು, ಆ ರೀತಿ ವಿಷಯ ತಿಳಿದ ನಂತರ ನಾನು ವಾದಿಗೆ ರಿಪ್ಲೈ ನೋಟೀಸು ಕೊಟ್ಟಿರುತ್ತೀನಾ ಎಂದರೆ ಸಾಕ್ಷಿ ಪ್ರಸ್ತುದ ದಾವೆಯಲ್ಲಿ ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.

6. ವಾದಿ ನಿಪಿ-10 ರಂತೆ ಅದರಲ್ಲಿ ನಮೂದಿಸಿರುವ ನನ್ನ ವಿಳಾಸಕ್ಕೆ ದಿನಾಂಕ 20/07/2020 ರಂದು ನೋಟೀಸನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ, ಮರೆತಿದ್ದೇನೆ ಎಂದು ನುಡಿದಿರುತ್ತಾರೆ. ಸದರಿ ನೋಟೀಸಿಗೆ ನಾನು ಉತ್ತರ ಕೊಟ್ಟಿದ್ದೇನಾ ಎಂದರೆ ಸಾಕ್ಷಿಯು ಮರೆತಿದ್ದೇನೆ, ನೆನಪಿಲ್ಲ ಎಂದು ನುಡಿದಿರುತ್ತಾರೆ. ನಿಪಿ-12 ರ ಡಿಮ್ಯಾಂಡ್ ರಿಜಿಸ್ಟರಿನ ಎಕ್ಸಟ್ರಾಕ್ಟನಲ್ಲಿ ಕಾಣಿಸಿರುವ ವಿಳಾಸದಲ್ಲಿ ನಾನು ವಾಸಿಸುತಿತದ್ದೇನೆ ಎಂದರೆ ಸರಿ. ನಿಪಿ-8 ಮತ್ತು 9 ರ ಆನ್ ಡಿಮ್ಯಾಂಡ್ ಪ್ರೊನೋಟಿನಲ್ಲಿ  ನಿಪಿ-8(ಎ) ಮತ್ತು 9(ಎ)ರಂತೆ ಹರೀಶ್ ಎಸ್ ಎಸ್ ಎಂದು ಗುರುತಿಸಲ್ಪಟ್ಟಿರುವ ಸಹಿಗಳು ನನ್ನದೆ ಆಗಿರುತ್ತದೆ ಎಂದರೆ ಸುಳ್ಳು. ಸದರಿ ಸಹಿಗಳು ಯಾರದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

7. ವಾದಿ ನನಗೆ ಸೇರಿದ ಚೆಕ್ಕು ಮತ್ತು ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟುಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಅವರು ವಿರುದ್ದ ಕಾನೂನುಕ್ರಮ ಜರುಗಿಸಿರುತ್ತೇನಾ ಎಂದರೆ ಸಾಕ್ಷಿ ಈ ದಾವೆ ಹೂಡಿದ ನಂತರ ಆ ವಿಚಾರ ನನಗೆ ತಿಳಿದುಬಂದಿದ್ದು, ನಾನು ಪ್ರಸ್ತುತ ದಾವೆಯಲ್ಲಿ ಮುಂದುವರೆದಿದ್ದೇನೆ ಎಂದು ನುಡಿದಿರುತ್ತಾರೆ. ವಾದಿ ನನಗೆ ಸಂಬಂಧಿಕರಲ್ಲ. ಕಡೂರಿನಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್‌ಗೆ ಸಂಬಂದಪಟ್ಟಂತೆ ಜಾಯಿಂಟ್ ವೆಂಚರ್ ಮಾಡಿಕೊಳ್ಳುವ ಸಮಯದಲ್ಲಿ ವಾದಿಯ ಪರಿಚಯ ನನಗೆ ಆಗಿರುತ್ತದೆ.

ವಾದಿ ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಪ್ರತಿವಾದ ಪತ್ರ ಮತ್ತು ಅದರ ಜತೆ ಸಲ್ಲಿಸಿರುವ ಪರಿಶೀಲನಾ ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದಾಗಿರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಸಹಿಗಳು ಸಹ ನನ್ನದಾಗಿರುತ್ತದೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.